ತುಮಕೂರು ವಿಭಾಗದ ಕುಣಿಗಲ್ ಘಟಕಕ್ಕೆ ಜನವರಿ–15ರ ಮಾಹೆಯ ಅಂತ್ಯಕ್ಕೆ 9.00 ಲಕ್ಷ ಮೀರಿ ಕ್ರಮಿಸಿರುವ ವಾಹನಗಳು ಕಾರ್ಯಾಚರಣೆಯಲ್ಲಿ ಇರುವುದಿಲ್ಲ.

ಇ) 2014–15ನೇ ಸಾಲಿನಲ್ಲಿ 09 ಹೊಸ ವಾಹನಗಳನ್ನು ಕುಣಿಗಲ್ ಘಟಕಕ್ಕೆ ನಿಯೋಜಿಸಲಾಗಿರುತ್ತದೆ.

ಸಂಚಾರ ಇಲಾಖೆಯಿಂದ, ವಿಭಾಗದಿಂದ ಬರುವ ಬೇಡಿಕೆ ಮತ್ತು ಹೆಚ್ಚುವರಿ ವಾಹನಗಳ ಶೇಕಡವಾರು ಪರಿಮಾಣಕ್ಕೆ ಅನುಗುಣವಾಗಿ ಹೊಸ ವಾಹನಗಳನ್ನು ಪೂರೈಸಲಾಗುತ್ತಿದೆ.

ಬಿ.ಪಿ.ಎಲ್ ಪಡಿತರ ಹಂಚಿಕೆ ಸ್ಥಗಿತಗೊಂಡಿರುವುದು

1652(1862); ಶ್ರೀ ನಾಗರಾಜಯ್ಯ ಡಿ. (ಕುಣಿಗಲ್)

ಅ) ಕುಣಿಗಲ್ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬಿಪಿಎಲ್ ಪಡಿತರ ಚೀಟಿಗಳ ಹಂಚಿಕೆಯು ಸ್ಥಗಿತಗೊಂಡಿರುವುದರಿಂದ ಕಡು ಬಡವರಿಗೆ ಪಡಿತರ ದೊರೆಯದೇ ತೊಂದರೆಪಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಬಿಪಿಎಲ್ ಪಡಿತರ ಚೀಟಿ ನೀಡುವಲ್ಲಿ ಸರ್ಕಾರವು ಕೈಗೊಂಡಿರುವ ಕ್ರಮಗಳೇನು (ಮಾಹಿತಿ ನೀಡುವುದು);

ಇ) ಅನರ್ಹರಿಗೆ ಬಿಪಿಎಲ್ ಕಾರ್ಡು ವಿತರಿಸುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಈಗಾಗಲೇ ವಿತರಿಸಿರುವ ಅನರ್ಹ ಬಿಪಿಎಲ್ ಪಡಿತರ ರದ್ದುಪಡಿಸಿ, ಅರ್ಹ ಫಲಾನುಭವಿಗಳಿಗೆ ಬಿಪಿಎಲ್ ಪಡಿತರ ವಿತರಿಸಲು ಸರ್ಕಾರವು ಕೈಗೊಳ್ಳಲಿರುವ ಕ್ರಮಗಳೇನು (ಮಾಹಿತಿ ನೀಡುವುದು)?

ಶ್ರೀ ದಿನೇಶ್ ಗುಂಡೂರಾವ್ (ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು)

ಅ) ಕುಣಿಗಲ್ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬಿಪಿಎಲ್ ಮತ್ತು ಎಪಿಎಲ್ ಪಡಿತರ ಚೀಟಿಗಳ ವಿತರಣಾ ಕಾರ್ಯ ಸ್ಥಗಿತಗೊಂಡಿರುವುದಿಲ್ಲ. ಪಡಿತರ ಚೀಟಿ ವಿತರಣಾ ಕಾರ್ಯ ಚಾಲ್ತಿಯಲ್ಲಿರುತ್ತದೆ. ಪ್ರಸ್ತುತ ಕುಣಿಗಲ್ ವಿಧಾನಸಭಾ ಕ್ಷೇತ್ರದಲ್ಲಿ ಚಾಲ್ತಿಯಲ್ಲಿರುವ ಪಡಿತರ ಚೀಟಿಗಳ ಮಾಹಿತಿ ಈ ಕೆಳಕಂಡಂತಿರುತ್ತದೆ:

ಎಎವೈ	ಬಿಪಿಎಲ್	ಒಟ್ಟು
2,457	46,307	**48,764**

ಆ) ಕುಣಿಗಲ್ ವಿಧಾನಸಭಾ ಕ್ಷೇತ್ರದಲ್ಲಿ ಹೊಸ ಪಡಿತರ ಚೀಟಿಗಳನ್ನು ಕೋರಿ ಬಂದಿರುವ 14,962 ಅರ್ಜಿಗಳನ್ನು ಸ್ವೀಕರಿಸಲಾಗಿದ್ದು, ಅರ್ಜಿಗಳನ್ನು ವಿಂಗಡಿಸಿ ನ್ಯಾಯಬೆಲೆ ಅಂಗಡಿ ಮಟ್ಟದ ಅಧಿಕಾರಿ (FLO) ಗಳಿಂದ ಪರಿಶೀಲನೆಗೆ ಒಳಪಡಿಸಿದ್ದು, ಅರ್ಜಿಗಳ ಸ್ಥಳ ತನಿಖೆ ಮಾಡಲಾಗುತ್ತಿದೆ. ತನಿಖಾ ವರದಿಯನ್ನಾಧರಿಸಿ ಆಹಾರ ನಿರೀಕ್ಷಕರು ವಿದ್ಯುತ್ ಆರ್.ಆರ್. ಸಂಖ್ಯೆ, ಚುನಾವಣಾ ಗುರುತಿನ ಚೀಟಿ, ಆಧಾರ್ ಗುರುತಿನ ಚೀಟಿಗಳೊಂದಿಗೆ ಅರ್ಜಿಗಳನ್ನು ಪರಿಶೀಲಿಸಿ ನಂತರ ಅರ್ಹತೆಗೆ ಅನುಗುಣವಾಗಿ ಪಡಿತರ ಚೀಟಿಯನ್ನು ವಿತರಿಸಲಾಗುತ್ತಿದೆ. ಫಲಾನುಭವಿಗಳ ಆಯ್ಕೆ ಹಾಗೂ ಪಡಿತರ ಚೀಟಿ ಮುದ್ರಣ ಎರಡನ್ನು ಅಂತಿಮಗೊಳಿಸುವ ಅಧಿಕಾರ ಆಹಾರ ನಿರೀಕ್ಷಕರಿಗೆ ನೀಡಲಾಗಿರುತ್ತದೆ.

ಕುಣಿಗಲ್ ವಿಧಾನ ಸಭಾ ವ್ಯಾಪ್ತಿಯಲ್ಲಿ ಈಗಾಗಲೇ 9691 ಪಡಿತರ ಚೀಟಿಗಳನ್ನು ವಿತರಿಸಲಾಗಿದೆ. 1188 ಪಡಿತರ ಚೀಟಿಗಳು ಮುದ್ರಣಗೊಂಡು ವಿತರಣೆಗೆ ಬಾಕಿ ಇದೆ. 1694 ಅರ್ಜಿಗಳು ತಿರಸ್ಕೃತಗೊಂಡಿರುತ್ತದೆ. ಉಳಿದ ಅರ್ಜಿಗಳಲ್ಲಿ 1592 ಎಪಿಕ್

ಮಾಹಿತಿಯನ್ನು ಅರ್ಜಿದಾರರು ಸಲ್ಲಿಸಿರುತ್ತಾರೆ. 797 ಅರ್ಜಿದಾರರು ಎಪಿಕ್ ಮಾಹಿತಿಯನ್ನು ಸಲ್ಲಿಸಿರುವುದಿಲ್ಲ.

ಇ) ಅನರ್ಹರಿಗೆ ಬಿಪಿಎಲ್ ಕಾರ್ಡ್ ವಿತರಣೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಈ) ಅನರ್ಹ ಬಿಪಿಎಲ್ ಪಡಿತರ ಚೀಟಿಗಳನ್ನು ಪತ್ತೆ ಹಚ್ಚಿ ರದ್ದುಪಡಿಸಲು ಈ ಕೆಳಕಂಡಂತೆ ಕ್ರಮಗಳನ್ನು ಕೈಗೊಳ್ಳಲಾಗಿದೆ.

1) ಪ್ರತಿ ಮಾಹೆ ನ್ಯಾಯಬೆಲೆ ಅಂಗಡಿಯ ಬಳಿ ನ್ಯಾಯಬೆಲೆ ಅಂಗಡಿಯ ವ್ಯಾಪ್ತಿಯಲ್ಲಿನ ಅರ್ಹ ಪಡಿತರ ಚೀಟಿಯ ಪಟ್ಟಿಯನ್ನು ಸಾರ್ವಜನಿಕರ ವೀಕ್ಷಣೆಗಾಗಿ ಪ್ರಕಟಿಸುವುದು ಕಡ್ಡಾಯ ಮಾಡಲಾಗಿದೆ. ಪ್ರಕಟಿತ ಪಟ್ಟಿಯಲ್ಲಿರುವ ಅನರ್ಹ ಪಡಿತರ ಚೀಟಿದಾರರ ಬಗ್ಗೆ ಸಾರ್ವಜನಿಕರು ಇಲಾಖೆಗೆ ದೂರು ಸಲ್ಲಿಸಿದ್ದಲ್ಲಿ ಅಂತಹ ಅನರ್ಹ ಫಲಾನುಭವಿಗಳ ಬಗ್ಗೆ ತನಿಖೆ ನಡೆಸಿ ಅಂತಹ ಅನರ್ಹ ಪಡಿತರ ಚೀಟಿಗಳನ್ನು ರದ್ದುಗೊಳಿಸಲು ಕ್ರಮವಹಿಸಲಾಗುತ್ತಿದೆ.

2) ಪಡಿತರ ಚೀಟಿದಾರರ ಕುಟುಂಬದ ಸದಸ್ಯರ ಎಪಿಕ್ ಮತ್ತು ಆಧಾರ್ ಗುರ್ತಿನ ಚೀಟಿಗಳನ್ನು ಅವರ ಪಡಿತರ ಚೀಟಿಗೆ ಕಡ್ಡಾಯ ಜೋಡಣೆ ಕ್ರಮವನ್ನು ಸರ್ಕಾರ 2014ರ ಜೂನ್‌ನಿಂದ ಜಾರಿಗೆ ತಂದಿದ್ದು ಪಡಿತರ ಚೀಟಿಗೆ ಎಪಿಕ್ ಮತ್ತು ಆಧಾರ್ ಜೋಡಣೆಯ ಕಾರ್ಯದಿಂದ ಸಾಕಷ್ಟು ಅನರ್ಹ/ಬೋಗಸ್ ಪಡಿತರ ಚೀಟಿಗಳನ್ನು ಪತ್ತೆ ಹಚ್ಚಲಾಗಿದ್ದು ಅವುಗಳಿಗೆ ಪಡಿತರ ಹಂಚಿಕೆಯನ್ನು ಸ್ಥಗಿತಗೊಳಿಸಲಾಗಿದೆ. ಈ ಪಡಿತರ ಚೀಟಿಗಳ ಬಗ್ಗೆ ಸ್ಥಳ ತನಿಖೆ ಕೈಗೊಂಡು ಇಲಾಖೆಯ ದತ್ತಾಂಶದಿಂದ ವಜಾಗೊಳಿಸಲು ಕ್ರಮವಹಿಸಲಾಗುತ್ತಿದೆ.

3) 2015ರ ಫೆಬ್ರವರಿ ಮಾಹೆಯಿಂದ ನ್ಯಾಯಬೆಲೆ ಅಂಗಡಿಯವರು ತಮಗೆ ನಿಯೋಜಿಸಲ್ಪಟ್ಟ ಪಡಿತರ ಚೀಟಿದಾರರಿಂದ ಕಡ್ಡಾಯವಾಗಿ ಆ ಕುಟುಂಬದ ಸದಸ್ಯರುಗಳ ಎಪಿಕ್ ಮತ್ತು ಆಧಾರ್ ಗುರ್ತಿನ ಚೀಟಿ ಸಂಖ್ಯೆಗಳನ್ನು ಸಂಗ್ರಹಿಸಲು ಕಡ್ಡಾಯ ಮಾಡಲಾಗಿದೆ. ಈ ರೀತಿ ನ್ಯಾಯಬೆಲೆ ಅಂಗಡಿಯವರು ಸಂಗ್ರಹಿಸಿದ ಎಪಿಕ್ ಮತ್ತು ಆಧಾರ್ ಗುರ್ತಿನ ಚೀಟಿ ಸಂಖ್ಯೆಗಳನ್ನು ಸಂಬಂಧಪಟ್ಟ ಪಡಿತರ ಚೀಟಿದಾರರ ಪಡಿತರ ಚೀಟಿಗೆ ಜೋಡಣೆ ಮಾಡುವ ಕಾರ್ಯವನ್ನು ತೀವ್ರಗೊಳಿಸಲಾಗುತ್ತಿದೆ. ಈ ಕಾರಣದಿಂದ ಅನರ್ಹ/ಬೋಗಸ್ ಪಡಿತರ ಚೀಟಿಗಳು ಪತ್ತೆ ಆಗುವ ಸಾಧ್ಯತೆಯಿರುತ್ತದೆ. ಅಂತಹ ಅನರ್ಹ ಪಡಿತರ ಚೀಟಿಗಳ ಬಗ್ಗೆ ಸ್ಥಳ ತನಿಖೆ ನಡೆಸಿ ವರದಿ ಪಡೆದು ವಜಾಗೊಳಿಸಲು ಕ್ರಮವಹಿಸಲಾಗುತ್ತದೆ. ಇದಲ್ಲದೆ

4) ನ್ಯಾಯಬೆಲೆ ಅಂಗಡಿ ಮಾಲೀಕರ/ಕಾರ್ಯದರ್ಶಿಗಳ ಸಭೆಯನ್ನು ತಾಲ್ಲೂಕು ಮಟ್ಟದಲ್ಲಿ ನಡೆಸಲಾಗುತ್ತಿದ್ದು ಸಭೆಯಲ್ಲಿ ಸಂಬಂಧಪಟ್ಟ ತಾಲ್ಲೂಕಿನ ತಹಶೀಲ್ದಾರರು ಮತ್ತು ಆಹಾರ ಇಲಾಖೆಯ ಜಿಲ್ಲಾ ಉಪ ನಿರ್ದೇಶಕರು, ನ್ಯಾಯಬೆಲೆ ಅಂಗಡಿ ಪರವಾನಿಗೆದಾರರು/ಸಹಕಾರ ಸಂಘದ ಕಾರ್ಯದರ್ಶಿಗಳು ತಮ್ಮ ನ್ಯಾಯಬೆಲೆ ಅಂಗಡಿಯಲ್ಲಿ ನೋಂದಣಿಯಾಗಿರುವ ಅನರ್ಹ ಮತ್ತು ಬೋಗಸ್ ಪಡಿತರ ಚೀಟಿಗಳನ್ನು ಸ್ವಯಂಘೋಷಣೆ ಮಾಡಿ ಪಟ್ಟಿಯನ್ನು ತಯಾರಿಸಿ ಕಛೇರಿಗೆ ಸಲ್ಲಿಸಲು ಕಡ್ಡಾಯಗೊಳಿಸಿದೆ. ಇದರಿಂದಾಗಿ ಈ ಜಿಲ್ಲೆಯ ಗುಬ್ಬಿ ತಾಲ್ಲೂಕಿನ ನ್ಯಾಯಬೆಲೆ ಅಂಗಡಿ ಪರವಾನಿಗೆದಾರರು ಈ ತನಕ 485 ಪಡಿತರ ಚೀಟಿಗಳನ್ನು ಅನರ್ಹ ಪಡಿತರ ಚೀಟಿಗಳೆಂದು ಸ್ವಯಂ ಘೋಷಣೆ ಮಾಡಿ ತಾಲ್ಲೂಕು ಕಛೇರಿಗೆ ಸಲ್ಲಿಸಿರುತ್ತಾರೆ. ಈ ಪಡಿತರ ಚೀಟಿಗಳಿಗೆ ಈಗಾಗಲೇ ಹಂಚಿಕೆಯನ್ನು ನಿಲ್ಲಿಸಿ ಇಲಾಖೆಯ ದತ್ತಾಂಶದಿಂದ ವಜಾಗೊಳಿಸಲಾಗಿದೆ.

5) ಇದಲ್ಲದೆ ಜಿಲ್ಲೆಯ ಎಲ್ಲಾ ತಾಲ್ಲೂಕು ಕಛೇರಿ ಮತ್ತು ಗ್ರಾಮ ಪಂಚಾಯಿತಿಯ ಮುಂಭಾಗದಲ್ಲಿ ಅನರ್ಹ/ಬೋಗಸ್ ಪಡಿತರ ಚೀಟಿಗಳನ್ನು ಸ್ವಯಂ ಪಡಿತರ ಚೀಟಿದಾರರೇ ತಂದು ಪೆಟ್ಟಿಗೆಯಲ್ಲಿ ಹಾಕಲು ಕ್ರಮ ಕೈಗೊಳ್ಳಲಾಗುತ್ತಿದೆ. ಈ ಬಗ್ಗೆ ಜಿಲ್ಲೆಯ ಮಾಧ್ಯಮಗಳಾದ ಸ್ಥಳೀಯ ಪತ್ರಿಕೆಗಳಲ್ಲಿ ಮತ್ತು ಗ್ರಾಮ ಪಂಚಾಯಿತಿ ಸೇವಾ ಕೇಂದ್ರಗಳಲ್ಲಿ ಮತ್ತು ಪಟ್ಟಣ ಪ್ರದೇಶದ ಸೇವಾ ಕೇಂದ್ರಗಳ ಮುಂದೆ ಭಿತ್ತಿ ಪತ್ರಗಳಲ್ಲಿ ಪ್ರಚಾರ ಮಾಡಲಾಗಿದೆ.

ಈವರೆಗೆ 34,042 ಅಂತ್ಯೋದಯ, 8,39,607 ಬಿಪಿಎಲ್ ಸೇರಿದಂತೆ ಒಟ್ಟು 8,73,649 ಅನರ್ಹ ಪಡಿತರ ಚೀಟಿಗಳನ್ನು ರದ್ದುಪಡಿಸಿ, ಸದರಿ ಪಡಿತರ ಚೀಟಿಗಳಿಗೆ ಆಹಾರಧಾನ್ಯ ಮತ್ತು ಸೀಮೆಎಣ್ಣೆ ಹಂಚಿಕೆಯನ್ನು ನಿಲ್ಲಿಸಲಾಗಿರುತ್ತದೆ. ಈ ನಿಟ್ಟಿನಲ್ಲಿ ಈ ವರೆಗೆ ಜರುಗಿಸಿರುವ ಕ್ರಮದ ವಿವರ ಕೆಳಕಂಡಂತಿದೆ.

ಅನರ್ಹ ಪಡಿತರ ಚೀಟಿಗಳಿಗೆ ಸಂಬಂಧಿಸಿದಂತೆ;

1) 19 ವ್ಯಕ್ತಿಗಳ ಮೇಲೆ ಕ್ರಿಮಿನಲ್ ಮೊಕದ್ದಮೆ ದಾಖಲಿಸಿದೆ.
2) 35 ನ್ಯಾಯಬೆಲೆ ಅಂಗಡಿಗಳ ಪ್ರಾಧಿಕರಣ ರದ್ದುಗೊಳಿಸಿದೆ.
3) 42 ನ್ಯಾಯಬೆಲೆ ಅಂಗಡಿಗಳ ಪ್ರಾಧಿಕಾರ ಅಮಾನತ್ತುಗೊಳಿಸಿದೆ.
4) 02 ನ್ಯಾ.ಬೆ.ಅಂಗಡಿಗಳ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿದೆ.
5) 13 ಫೋಟೋ ಬಯೋ ಸೇವಾ ಕೇಂದ್ರಗಳ (ಫ್ರಾಂಚೈಸಿಗಳು) ಮೇಲೆ ಕ್ರಿಮಿನಲ್ ಪ್ರಕರಣ ದಾಖಲಿಸಿದೆ.
6) 14 ಅಧಿಕಾರಿ/ಸಿಬ್ಬಂದಿಗಳ ವಿರುದ್ಧ ಕ್ರಮ ಜರುಗಿಸಿದೆ.

ಅರ್ಹ ಫಲಾನುಭವಿಗಳಿಗೆ ಬಿಪಿಎಲ್ ಪಡಿತರ ಚೀಟಿಗಳನ್ನು ವಿತರಿಸುವ ಕಾರ್ಯವು ಪ್ರಗತಿಯಲ್ಲಿರುತ್ತದೆ.